ಮುಚ್ಚಿಕೊಂಡಿತು. ಇರುವೆ ಬೇರೆ ದಾರಿಕಾಣದೆ ಹಾಗೇ ಮುಂದೆ ಬರುತ್ತಿದ್ದಾಗ ನಾಯಿಯೊಂದು ನೆಲವನ್ನು ಮೂಸುತ್ತಾ ಓಡಾಡುತ್ತಿರುವುದನ್ನು ಕಂಡಿತು. ಓಡೋಡಿ ನಾಯಿಯ ಮುಂದೆ ನಿಂತು, 'ನಾಯಣ್ಣ ನಾಯಣ್ಣ ನನಗೊಂದು ಸಹಾಯ ಮಾಡುವೆಯಾ?' ಎಂದು ವಿನಂತಿಸಿಕೊಂಡಿತು. ನಾಯಿ ಕೂಡ ಇರುವೆಯನ್ನು ತಿರಸ್ಕಾರದಿಂದಲೇ ನೋಡುತ್ತ, 'ಏನು ಸಹಾಯ ಬೇಕು ನಿನಗೆ?' ಎಂದು ಕೇಳಿತು. ಅದಕ್ಕೆ ಇರುವೆ ನಡೆದ ಕತೆಯನ್ನೆಲ್ಲಾ ಹೇಳಿ, 'ಆ ಸೊಕ್ಕಿನ ಬೆಕ್ಕನ್ನು ಹಿಡಿದು ತಿನ್ನುವೆಯಾ?' ಎಂದು ಕೇಳಿತು. ಅದಕ್ಕೆ ನಾಯಿ, 'ನನಗೆ ಬೇಕಾದಾಗ ಯಾವ ಊಟ ಮಾಡಬೇಕೆಂದು ನನಗೆ ಗೊತ್ತು. ನಿನಗೆ ನಾನ್ಯಾಕೆ ಸಹಾಯ ಮಾಡಬೇಕು, ತೆರಳು ಇಲ್ಲಿಂದ' ಎಂದು ಅಬ್ಬರಿಸಿ ಮತ್ತೆ ನೆಲ ಮೂಸುತ್ತಾ ಮುಂದೆ ಹೋಯಿತು.

ಇದರಿಂದ ಇರುವೆಗೆ ಬಹಳ ದುಃಖವಾಯಿತು. ಮತ್ತೇನು ಮಾಡುವುದು ಎಂದು ಯೋಚಿಸುತ್ತಿದ್ದಾಗ ಅಲ್ಲೊಂದು ಶಾಲೆಯ ಜಗುಲಿಯ ಮೇಲೆ ಬೆತ್ತದ ಕೋಲು ಒಂದನ್ನು ಗೋಡೆಗೆ ಒರಗಿಸಿ ನಿಲ್ಲಿಸಲಾಗಿತ್ತು. ಇರುವೆ ಕೋಲಿನ ಬಳಿ ಹೋಗಿ, 'ಕೋಲಣ್ಣ ಕೋಲಣ್ಣ ನನಗೊಂದು ಸಹಾಯ ಮಾಡುವೆಯಾ?' ಎಂದು ಕೇಳಿಕೊಂಡಿತು. ಇರುವೆಯ ದೈನ್ಯತೆಯನ್ನು ನೋಡಿ ಮನಕರಗಿದ ಕೋಲು, 'ಹೇಳು ಯಾರಿಗೆ ಹೊಡೆಯಬೇಕು, ಸರಿಯಾಗಿ ಕೊಡುತ್ತೇನೆ' ಎಂದು ನಕ್ಕು ಹೇಳಿತು. ಆದರೆ, ಕೋಲಿಗೆ ನಡೆದು ಹೋಗಲು ಕಾಲಿರಲಿಲ್ಲ, ಹೊಡೆಯಲು ಕೈಯಿರಲಿಲ್ಲ. 'ಯಾರ ಕೈಗಾದರೂ ನನ್ನನ್ನು ಕೊಡು, ಆಗ ನೀನು ಹೇಳಿದವರಿಗೆ ಹೊಡೆಯುತ್ತೇನೆ' ಎಂದಿತು. ಆಗ ಇರುವೆ ಶಾಲೆಯ ಎದುರೇ ಇರುವ ಮನೆಯಲ್ಲಿ ಪುಸ್ತಕ ಓದುತ್ತಾ ಕುಳಿತಿದ್ದ ಪುಟ್ಟಣ್ಣ ಎಂಬ ಹುಡುಗನ ಬಳಿ ಹೋಯಿತು. 'ಪುಟ್ಟಣ್ಣಾ ಪುಟ್ಟಣ್ಣ ನನಗೊಂದು ಸಹಾಯ ಮಾಡುತ್ತೀಯಾ' ಎಂದು ಕೇಳಿತು. ಹುಡುಗ ಇರುವೆ ಹೇಳಿದ್ದನ್ನು ಕೇಳಿಸಿಕೊಂಡರೂ ಕೇಳಿಸದವನಂತೆ ಕುಳಿತಿದ್ದ. ಈ ಇರುವೆ ಮಾತಿಗೆ ನಾನೇಕೆ ಬೆಲೆ ಕೊಡಬೇಕು ಎಂಬುದು ಅವನ ತಾತ್ಸಾರಕ್ಕೆ ಕಾರಣವಾಗಿತ್ತು. ಇರುವೆ ಮತ್ತೊಮ್ಮೆ ಬೇಡಿಕೊಂಡರೂ ಅವನು ಓಗೊಡಲಿಲ್ಲ. ಇರುವೆಗೆ ಸಿಟ್ಟು ಬಂತು.

ಕಾಲಿಲ್ಲದ ಕೈಯಿಲ್ಲದ ಬೆತ್ತದ ಕೋಲು ನನಗೆ ಸಹಾಯ ಮಾಡಲು ಮುಂದೆ ಬಂತು. ಆದರೆ, ಕಾಲು, ಕೈ, ಕಣ್ಣು ಎಲ್ಲವೂ ಇರುವ ಪ್ರಾಣಿಗಳು ತನ್ನ ಸಹಾಯಕ್ಕೆ ಬರಲಿಲ್ಲ. ಅದರಲ್ಲೂ ಬುದ್ಧಿವಂತನೆಂದು ಹೇಳಿಕೊಳ್ಳುವ ಮನುಷ್ಯನೂ ನನ್ನ ನೆರವಿಗೆ ಬರಲಿಲ್ಲ ಎಂದುಕೊಂಡಿತು. ಪುಟ್ಟಣ್ಣನಿಗೆ ಗೊತ್ತಿಲ್ಲದಂತೆ ಅವನ ಕಾಲಮೇಲೆ ಹರಿದು ತೊಡೆಸಂದಿಯಲ್ಲಿ ಬಲವಾಗಿ ಕಚ್ಚಿತು. 'ಅಯ್ಯೋ ಅಪ್ಪಾ' ಎನ್ನುತ್ತಾ ಎದ್ದ ಹುಡುಗ ನನ್ನನ್ನು ಕಚ್ಚಬೇಡ, ಏನು ಮಾಡಬೇಕು ಹೇಳು ಮಾಡುತ್ತೇನೆ' ಎಂದ. 'ಹಾಗಾದರೆ ಶಾಲೆಯ ಜಗುಲಿಯ ಮೇಲಿರುವ ಕೋಲಿನಿಂದ ಆ ನಾಯಿಗೆ ಹೊಡೆ' ಎಂದಿತು. ಪುಟ್ಟಣ್ಣ ಕೋಲನ್ನು ಹಿಡಿದು ನಾಯಿಗೆ ಬೀಸಿದ. ಏಟುತಿಂದ ನಾಯಿ ಕುಂಯಿಗುಟ್ಟುತ್ತಾ ಶರಣಾಯಿತು. 'ನಿನಗೆ ಏನು ಮಾಡಬೇಕು ಹೇಳು' ಎಂದು ಇರುವೆಯನ್ನು ಬೇಡಿಕೊಂಡಿತು. ಇರುವೆ, 'ಆ ಬೆಕ್ಕನ್ನು ಹಿಡಿದು ಕಚ್ಚು' ಎಂದು ನಾಯಿಗೆ ಆಜ್ಞೆ ಮಾಡಿತು. ನಾಯಿ ಬೊಗಳುತ್ತ ಬೆಕ್ಕನ್ನು ಅಟ್ಟಿಸಿಕೊಂಡು ಹೋಯಿತು. ಬೆಕ್ಕು ಜೀವ ಕೈಲಿ ಹಿಡಿದುಕೊಂಡು ಮಿಯಾಂವ್ ಮಿಯಾಂವ್ ಎನ್ನುತ್ತಾ ಇರುವೆಯ ಕಾಲಿಗೆ ಬಿದ್ದಿತು. 'ನನ್ನಿಂದ ಏನಾಗಬೇಕು ಮಾಡುತ್ತೇನೆ' ಎಂದು ಬೇಡಿಕೊಂಡಿತು. ಆಗ ಇರುವೆ, 'ಹೋಗಿ ಆ ಇಲಿಯನ್ನು ಹಿಡಿ' ಎಂದು ಸೂಚಿಸಿತು. ಬೆಕ್ಕು ಇಲಿಯನ್ನು ನಾಗಾಲೋಟದಲ್ಲಿ ಅಟ್ಟಿಸಿಕೊಂಡು ಹೋಯಿತು. ಇಲಿ ಬಿದ್ದಂಬೀಳ ಓಡಿ ಬಂದು ಇರುವೆಯ ಮುಂದೆ ಶರಣಾಯಿತು. 'ನಾನು ನಿನಗಾಗಿ ಏನು ಮಾಡಬೇಕು' ಎಂದು ಕೇಳಿತು. 'ಈಗಲೇ ಹೋಗಿ ಆ ಹಾವಾಡಿಗನ ಹಾವಿನ ಬುಟ್ಟಿಯನ್ನು ತುಂಡು ಮಾಡು' ಎಂದು ಇರುವೆ ಆದೇಶ ಮಾಡಿತು. ಇಲಿ ಹಾವಿನ ಬುಟ್ಟಿಯನ್ನು ಕಡಿದು ತುಂಡು ಮಾಡಿತು. ಹಾವಾಡಿಗನ ಬಳಿ ಸೆರೆಯಾಗಿದ್ದ ಹಾವು ನಿರಾಳವಾಗಿ ಹೊರಬಂತು.